

# 2019: ಸಮೀಕ್ಷೆ

‘ನಟಸಾರ್ವಭೌಮ’ ಸಿನಿಮಾದಲ್ಲಿ ಅನುಪಮಾ ಪರಮೇಶ್ವರನ್



ಕನ್ನಡ ಚಿತ್ರರಂಗಕ್ಕೂ ಕರ್ನಾಟಕದ ಮಳೆಚಕ್ರಕ್ಕೂ ಏನೋ ವೈರುಧ್ಯದ ಸಂಬಂಧ ಇರುವಂತಿದೆ. ಕಳೆದವರ್ಷ ರಾಜ್ಯದಲ್ಲಿ ಅತಿವೃಷ್ಟಿಯಾಗಿ ಕೊಡಗು–ಮಡಿಕೇರಿ ಭಾಗಗಳಲ್ಲಿ ಗುಡ್ಡಗಳು ಕುಸಿದು ಅನಾಹುತವಾಗಿತ್ತು. ಮಳೆ ಒಮ್ಮೆ ನಿಂತರೆ ಸಾಕಪ್ಪಾ ಎನ್ನುವ ಪರಿಸ್ಥಿತಿ ಉಂಟಾಗಿತ್ತು. ಇದಕ್ಕೆ ತದ್ವಿರುದ್ಧವಾಗಿ, 2018ರ ಚಿತ್ರರಂಗದ ಭೂಮಿಕೆಯತ್ತ ಒಮ್ಮೆ ಕಣ್ಣು ಹಾಯಿಸಿದರೆ ಒಣ ಒಣ ಬರಗಾಲದ ಪರಿಸ್ಥಿತಿ ಕಣ್ಣಿಗೆ ರಾಚುತ್ತದೆ. ಬಿಡುಗಡೆಯಾದ ಚಿತ್ರಗಳ ಸಂಖ್ಯೆ ದ್ವಿಶಕತದ ಗಡಿ ದಾಟಿದ್ದೇನೋ ನಿಜ. ಆದರೆ ಗಳಿಕೆಯಲ್ಲಿ ಡಲ್ ಔಟ್ ಆಗಿ ಪೆವಿಲಿಯನ್‌ಗೆ ಮರಳಿದ ಸಿನಿಮಾಗಳೇ ಬಹುಪಾಲು. ‘ಟಗರು’, ‘ಅಯೋಗ್ಯ’, ‘ಸಹಿಪ್ರಾ ಶಾಲೆ, ಕಾಸರಗೋಡು’ ಹೀಗೆ ಉತ್ತಮ ಗಳಿಕೆಯ ಸಿನಿಮಾಗಳು ಒಂದು ಕೈ ಬೆರಳ ಎಣಿಕೆಯನ್ನೂ ದಾಟುವುದಿಲ್ಲ.

ಸುದೀಪ್ ಮತ್ತು ಶಿವರಾಜ್‌ಕುಮಾರ್ ಜೋಡಿಯಾಗಿ ನಟಿಸಿದ್ದ, ಪ್ರೇಮ್ ನಿರ್ದೇಶನದ ಬಹುನಿರೀಕ್ಷಿತ ‘ದಿ ವಿಲನ್’ನಂಥ ಸಿನಿಮಾವನ್ನೇ ಪ್ರೇಕ್ಷಕ ‘ಓ ಭ್ರಮೆ’ ಎಂದು ನಕ್ಕು ಪಕ್ಕಕ್ಕೆ ಸರಿಸಿಬಿಟ್ಟ. ಪುನೀತ್, ದರ್ಶನ್, ಶ್ರೀಮುರಳಿ, ಧ್ರುವ ಸರ್ಜಾ, ಗಣೇಶ್ ಅವರಂಥ ಸ್ಟಾರ್ ನಟರೆಲ್ಲ ಶೂಟಿಂಗ್ ಸೆಟ್‌ನಲ್ಲಿ ಟೇಕ್ ಮೇಲೆ ಟೇಕ್ ತೆಗೆದುಕೊಳ್ಳುತ್ತಿದ್ದರೇ ವಿನಾ, ತೆರೆಯ ಮೇಲೆ ಮಾತ್ರ ಕೋರೈಸಲಿಲ್ಲ.

ವ್ಯಾಪಾರಿ ಸಿನಿಮಾಗಳಷ್ಟೇ ಅಲ್ಲ, ಪ್ರಯೋಗಶೀಲತೆಯ ದೃಷ್ಟಿಯಿಂದಲೂ 2018 ಒಣಗಿನಿಂತ ಜಾಲಿಮರವೇ. ‘ಒಂದಲ್ಲಾ ಎರಡಲ್ಲಾ’, ‘ಅಮ್ಮಚ್ಚಿಯೆಂಬ ನೆನಪು’, ‘ನಾತಿಚರಾಮಿ’ ಹೀಗೆ ಇದ್ದುದರಲ್ಲಿಯೇ ಬೆಟರ್ ಅನ್ನುವ ಸಿನಿಮಾಗಳನ್ನು ಆರಿಸಹೊರಟರೂ ಅದು ಮೂರ್ನಾಲ್ಕರ ಗಡಿ ದಾಟುವುದಿಲ್ಲ. ಅಚ್ಚರಿ ಹುಟ್ಟಿಸುವ, ಎಲ್ಲರೂ ಬೆರಗಿನಿಂದ ತಿರುಗಿ ನೋಡುವಂಥ ಸಿನಿಮಾಗಳು ಬರಲೇ ಇಲ್ಲ.

ಮೈ ಬೆವರನ್ನೂ ಹೀರಿಬಿಡುವಂಥ ಈ ಒಣಹವೆಯಲ್ಲಿ ಚಿತ್ರರಂಗ ತತ್ತರಿಸುತ್ತಿದ್ದಾಗ ವರ್ಷದ ಕೊನೆಗೆ ಬಂದ ‘ಕೆಜಿಎಫ್’ ಸಿನಿಮಾ ಮಾತ್ರ ದೊಡ್ಡ ಮಟ್ಟದಲ್ಲಿ ಹವಾ ಎಬ್ಬಿಸಿ ಬರದ ನೆಲಕ್ಕೆ ಬಿರುಮಳೆಯಾಗಿ ಸುರಿಯಿತು. ‘ಕೆಜಿಎಫ್’ ಕಳೆದ ವರ್ಷದ ಅಂತ್ಯದಲ್ಲಿ ಚಿತ್ರರಂಗಕ್ಕೆ ನೀಡಿದ ಈ ಸಾಂತ್ವನದಲ್ಲಿ ಈ ವರ್ಷದ ಶುಭಸಮಾಚಾರಗಳ ಸೂಚನೆಯೂ ಇತ್ತೆನಿಸುತ್ತದೆ.

ಈಗ 2019ರ ಹೊಸ್ತಿಲು ದಾಟಿ ನಿಲ್ಲೋಣ.

ಈ ವರ್ಷ ಮಳೆಚಕ್ರದ ಪಯಣ ಅಸ್ಪಷ್ಟವಾಗಿದೆ. ರಾಜ್ಯದ ಬಹುತೇಕ ಭಾಗಗಳಲ್ಲಿ ನೀರಿಗಾಗಿ ಹಾಹಾಕಾರ ಎದ್ದಿದೆ. ಕೆಲವೆಡೆಯಂತೂ ಕೊಳಚೆ ನೀರನ್ನೇ ಕುಡಿಯುವ ಪರಿಸ್ಥಿತಿ ಉದ್ಭವವಾಗಿದೆ. ಜೂನ್ ತಿಂಗಳ ಮಧ್ಯಭಾಗ ಮುಟ್ಟಿದರೂ ಮುಂಗಾರು ಮೋಹಕವಾಗಿಯೇನೂ ಕಾಣಿಸುತ್ತಿಲ್ಲ. ಬರದ ಬಿಸಿಲು ರಾಜ್ಯವನ್ನು ಹುರಿದು ಮುಕ್ಕುತ್ತಿದೆ. ಆದರೆ ಚಿತ್ರರಂಗದತ್ತ ಕಣ್ಣು ಹಾಯಿಸಿದರೆ ಮಾತ್ರ ಕಳೆದ ವರ್ಷ ಬಾಯ್ಬಿಟ್ಟಿದ್ದ ಭೂಮಿಕೆಯಲ್ಲೀಗ ಹಸಿರು–ಚಿಗುರು ಮೊಳಕೆಯೊಡೆಯುತ್ತಿದೆ. ಆ ಹಸಿರ ಜೀವಂತಿಕೆಯನ್ನು ಪ್ರಯೋಗಶೀಲತೆಯ ತಂಗಾಳಿಯೂ ನೇವರಿಸುತ್ತಿದೆ. ಜೂನ್ ತಿಂಗಳನ್ನು ಇಡೀ ವರ್ಷದ ಚಿತ್ರರಂಗದ ‘ಮಧ್ಯಂತರ’ ಎನ್ನಬಹುದಾದರೆ, ಇಂಟರ್ವಲ್ ಹೊತ್ತಿಗೆ ಆಟ ಕುತೂಹಲದ ಘಟ್ಟ ತಲುಪಿದೆ. ಪಾಪ್‌ಕಾರ್ನ್ ತರಲು ಹೋದವರೂ ಲಗುಬಗೆಯಿಂದ ಬಂದು ಸೀಟಿನಲ್ಲಿ ಪವಡಿಸಿ ಸೀಟಿ ಹೊಡೆಯಲು ಸಜ್ಜಾಗುವಷ್ಟು ಸೆಕೆಂಡ್ ಹಾಫ್ ಕುರಿತು ನಿರೀಕ್ಷೆ ಹುಟ್ಟಿದೆ.

ಹಾಗಾದರೆ ಫಸ್ಟ್ ಹಾಫ್ ಕಳೆಗಟ್ಟಲು ಕಾರಣವಾದ ಸಂಗತಿಗಳು ಯಾವುವು?

2019 ತನ್ನ ಖಾತೆ ತೆರೆದಿದ್ದೇ ಒಂದು ಕುತೂಹಲಕಾರಿ ಸಿನಿಮಾ ಮೂಲಕ. ‘ಕಸ್ತೂರಿ ನಿವಾಸ’ದಂಥ ಕ್ಲಾಸಿಕ್ ಸಿನಿಮಾ ಕೊಟ್ಟಿರುವ, ಬಾಂಡ್ ಶೈಲಿ ಸಿನಿಮಾಗಳ ಮೂಲಕ ಹವಾ ಎಬ್ಬಿಸಿದ್ದ ಕನ್ನಡದ ಜನಪ್ರಿಯ ಜೋಡಿ ನಿರ್ದೇಶಕರಾದ ದೊರೈ–ಭಗವಾನ್ ಯಾರಿಗೆ ಗೊತ್ತಿಲ್ಲ? ಈ ಜೋಡಿಯಲ್ಲಿ ದೊರೈ ನಮ್ಮನ್ನು